ಸಿ.ಸಿ. ನಂಬರ್‌ಃ **466/2015**
ಸಿ.ಡಬ್ಲ್ಯುಃ **13** ಪಿ.ಡಬ್ಲ್ಯುಃ **11**

ಪ್ರಧಾನ ದಿವಾಣಿ ಹಾಗೂ ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ ಇವರ ನ್ಯಾಯಾಲಯದಲ್ಲಿ,

ಧಾರವಾಡ

ಸಿ.ಸಿ. ನಂಬರ್‌ಃ **466/2015**

| | |
|---|---|
| ಸಾಕ್ಷಿಯ ಹೆಸರು | : ಮೈಲಾರಪ್ಪ ಮೂಗನೂರು |
| ತಂದೆಯ ಹೆಸರು | : ಹನಮಪ್ಪ |
| ವಯಸ್ಸು | : 59 ವರ್ಷ |
| ಉದ್ಯೋಗ | : ಎ ಎಸ್ ಐ, ಶಹರ ಪೋಲಿಸ್ ಠಾಣೆ, ಹುಬ್ಬಳ್ಳಿ |
| ವಾಸಸ್ಥಳ | : ಹುಬ್ಬಳ್ಳಿ |

ದಿಃ **14-11-2025** ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

1. ನಾನು 15-09-2011 ರಿಂದ 13-01-2017 ರವರೆಗೆ ವಿದ್ಯಾಗಿರಿ ಪೋಲಿಸ್ ಠಾಣೆ ಧಾರವಾಡ ದಲ್ಲಿ ಮುಖ್ಯ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣದಲ್ಲಿ ದಿನಾಂಕ: 18-11-2014 ರಂದು ಸಾಯಂಕಾಲ 7:20 ಗಂಟೆ ಸುಮಾರಿಗೆ ನಾನು, ಠಾಣೆಯಲ್ಲಿ ಕರ್ತವ್ಯದಲ್ಲಿ ಇದ್ದಾಗ ಚಾಸಾ-18 ರವರು ನನಗೆ ಹಾಗೂ ಸಿಬ್ಬಂದಿಯವರಾದ ಚಾಸಾ.14 ರಿಂದ 17 ರವರನ್ನು ಕರೆದು ತಮಗೆ ಭಾತ್ಮಿ ವಿಷಯವಾದ ಧಾರವಾಡದ ಯಾಲಕ್ಕಿಶೆಟ್ಟರ ಕಾಲೋನಿಯಲ್ಲಿ ಒಂದನೇ ಕ್ರಾಸ್ ಹತ್ತಿರ ಬಾಲಾಜಿ ಗೋಲ್ಡ ಅಂಗಡಿಯ ಹತ್ತಿರ ಎರಡು ಹುಡುಗರು ಬಂಗಾರದ ಆಭರಣ ಮಾರಾಟಕ್ಕೆ ದ್ವಿಚಕ್ರ ವಾಹನದ ಮೇಲೆ ಬಂದಿರುತ್ತಾರೆ ತಿಳಿಸಿರುತ್ತಾರೆ. ನಂತರ ಇಬ್ಬರು ಪಂಚರಾದ ಚಾಸಾ.6 ಮತ್ತು 7 ರವರನ್ನು ಸಿಬ್ಬಂದಿಯ ಮುಖಾಂತರ ಬರಮಾಡಿಕೊಂಡಿರುತ್ತಾರೆ. ಸದರಿ ಮಾಹಿತಿಯನ್ನು

ಚಾಸಾ.18 ರವರು ಇಬ್ಬರು ಪಂಚರಿಗೆ ತಿಳಿಸಿರುತ್ತಾರೆ. ಸದರಿ ಪಂಚರು ಇಬ್ಬರು ಪಂಚರಾಗಲು ಒಪ್ಪಿಕೊಂಡಿರುತ್ತಾರೆ.

3. ನಂತರ ನಮ್ಮ ಇಲಾಖಾ ಜೀಪದಲ್ಲಿ ನಾವೆಲ್ಲರೂ ಕೂಡಿಕೊಂಡು ಮಾಹಿತಿ ಇದ್ದ ಸ್ಥಳಕ್ಕೆ ಠಾಣೆಯಿಂದ ಗಾಂಧಿನಗರ ಮುಖಾಂತರ ಸಂಜೆ 7.30 ಕ್ಕೆ ಹೊರಟು ಸದರಿ ಸ್ಥಳಕ್ಕೆ 7-45 ಕ್ಕೆ ತಲುಪಿ ಸ್ವಲ್ಪ ದೂರದಲ್ಲಿ ಮರೆಯಾಗಿ ನಿಂತು ನೋಡಲಾಗಿ ಇಬ್ಬರು ಹುಡುಗರು ಬಾಲಾಜಿ ಗೋಲ್ಡ್ ಶಾಪ್ ಎದುರಿಗೆ ಕ್ರಾಸ್ ಹತ್ತಿರ ಮೋಟಾರ್ ಸೈಕಲ್ ಹತ್ತಿರ ನಿಂತುಕೊಂಡಿದ್ದರು. ನಂತರ ಅವರ ಮೇಲೆ ಸಂಶಯ ಬಂದು ಅವರ ಹತ್ತಿರ ಹೋಗಲಾಗಿ ಸದರಿ ವ್ಯಕ್ತಿಗಳು ಓಡಿ ಹೋಗುತ್ತಿರುವಾಗ ಹಿಡಿದುಕೊಂಡಿರುತ್ತೇವೆ. ಆಗ ಸಮಯ 8.00 ಗಂಟೆ ಆಗಿತ್ತು. ಸದರಿ ವ್ಯಕ್ತಿಗಳ ಹೆಸರನ್ನು ಚಾಸಾ.18 ರವರು ವಿಚಾರಿಸಲಾಗಿ ಸರಿಯಾದ ಹೆಸರನ್ನು ಹಾಗೂ ವಿಳಾಸವನ್ನು ನೀಡಲಿಲ್ಲ, ಪುನಃ ಪ್ರಶ್ನೆ ಮಾಡಲಾಗಿ ಒಂದನೇ ಆರೋಪಿ ಜಗದೀಶ ಇಟೀ, ವಃ31 ವರ್ಷ ಹಾಗೂ ಎರಡನೇ ಆರೋಪಿ ಬಸವರಾಜ ತಳವಾರ ಎಂದು ಹೇಳಿರುತ್ತಾರೆ.

4. ನಂತರ ಸದರಿ ಇಬ್ಬರು ವ್ಯಕ್ತಿಗಳನ್ನು ವಿಚಾರಿಸಲಾಗಿ ಸಮರ್ಪಕ ಉತ್ತರ ನೀಡದೇ ಇದ್ದಿದ್ದರಿಂದ ಪಂಚರ ಸಮಕ್ಷಮ ಸದರಿ ವ್ಯಕ್ತಿಗಳನ್ನು ಪರಿಶೀಲನೆ ಮಾಡಲಾಗಿ ಒಂದನೇ ಆರೋಪಿಯ ಹತ್ತಿರ ಒಂದು ಬಂಗಾರದ ಚೈನ್ ನ ತುಂಡು ಹಾಗೂ ಒಂದು ಮೈಕ್ರೊ ಮ್ಯಾಕ್ಸ ಕಂಪನಿಯ ಮೊಬೈಲ ಹ್ಯಾಂಡಸೆಟ್ ಹಾಗೂ ಎರಡನೇ ಆರೋಪಿಯ ಹತ್ತಿರ ಹಿರೋ ಹೋಂಡಾ ಸ್ಪೆಂಡರ್ ಮೊಟಾರ್ ಸೈಕಲ್ ನಂ.ಕೆ ಎ 25 ಎಕ್ಸ 4017 ಇತ್ತು. ಸದರಿ ಮೋಟಾರ ಸೈಕಲ್ ಯಾರದು ಎಂದು ವಿಚಾರಿಸಲಾಗಿ ಎರಡನೇ ಆರೋಪಿಯ ಅಣ್ಣನ ಹೆಸರಿನಲ್ಲಿ ಇದೆ ಎಂದು ತಿಳಿಸಿದರು. ಎರಡನೇ ಆರೋಪಿಯ ವಶದಲ್ಲಿ ಒಂದು ಸ್ಯಾಮಸಂಗ ಮೊಬೈಲ್ ಇತ್ತು. ಸದರಿ ಬಂಗಾರದ ಆಭರಣಗಳು ಎಲ್ಲಿಯವು ಎಂದು ಕೇಳಲಾಗಿ ಒಂದನೇ ಆರೋಪಿಯು ಕಳೆದ 4 ದಿನಗಳ ಹಿಂದೆ ಧಾರವಾಡ ರೈಲ್ವೇ ಪ್ಲಾಟ್ ಫಾರ್ಮದಿಂದ ಒಬ್ಬ ಮಹಿಳೆ ಬರುತ್ತಿದ್ದಳು, ಅವಳು ಹತ್ತಿಕೊಳ್ಳದಿಂದ ಬರುತ್ತಿರುವಾಗ ನಾವು ಅದನ್ನು ಕಿತ್ತುಕೊಂಡು ಬಂದೆನು ಎಂದು ಒಂದನೇ ಆರೋಪಿಯು ಹೇಳಿದನು. ಪಂಚರ ಸಮಕ್ಷಮ ಬಾಲಾಜಿ ಗೋಲ್ಡ್ ಶಾಪ್ ನ ಪತ್ತಾರ ರವರಾದ

ರಾಘವೇಂದ್ರ ಶೇಟ್ ಇವರ ಬಳಿ ಪರಿಶೀಲನೆ ಮಾಡಿಸಲಾಗಿ ಸದರಿ ಬಂಗಾರದ ಆಭರಣ 23 ಗ್ರಾಂ ದ ಮೂರು ಬಾಕ್ಸ ಮಾಟದ ಬಂಗಾರದ ತುಣುಕುಗಳು ಇದ್ದವು. ಪಂಚರ ಸಮಕ್ಷಮ ಪಂಚನಾಮೆ ಮಾಡಿ ಆರೋಪಿ ನಂ.1 ರವರ ಬಳಿಯಿಂದ ಬಂಗಾರದ ಚೈನನ ತುಂಡುಗಳು, ಮೈಕ್ರೊಮ್ಯಾಕ್ಸ ಮೋಬೈಲ್ , ಜರ್ಕಿನ ಹಾಗೂ ಎರಡನೇ ಆರೋಪಿಯ ಕಡೆಯಿಂದ ಸಮಸ್ಯಾಂಗ್ ಮೊಬೈಲ್, ಮೋಟಾರ್ ಸೈಕಲ್ ಗಳನ್ನು ಜಪ್ತಿ ಪಡಿಸಿಕೊಂಡಿರುತ್ತೇವೆ. ಪಂಚನಾಮೆ ಮಾಡಿದಾಗ ಸಮಯ ರಾತ್ರಿ 8.10 ಗಂಟೆಯಿಂದ 9.15 ಗಂಟೆಯವರೆಗೆ ಮಾಡಿ ಮುಗಿಸಿರುತ್ತೇವೆ. ಸಾಕ್ಷಿಯು ಈಗಾಗಲೇ ಗುರುತಿಸಿರುವ ನಿಪಿ.4 ಪಂಚನಾಮೆಯನ್ನು ಹಾಗೂ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.4(ಡಿ) ಎಂದು ಗುರುತಿಸಲಾಯಿತು. ನಂತರ ಪೋಲಿಸ ಠಾಣೆಗೆ ಬಂದೆವು.

5. ಚಾಸಾ.18 ರವರು ಆರೋಪಿತರನ್ನು ಮತ್ತೆ ವಿಚಾರಣೆ ಮಾಡಿದಾಗ ಒಂದನೇ ಆರೋಪಿಯು ತಾನು ಮಾಳಮಡ್ಡಿಯಲ್ಲಿ, ಗಾಂಧಿ ನಗರದಲ್ಲಿ ಹಾಗೂ ರೈಲ್ವೇ ಸ್ಟೇಶನ ಹತ್ತಿರ ಕಳ್ಳತನ ಮಾಡಿದ್ದೇನೆ ಎಂದು ತಿಳಿಸಿರುತ್ತೇನೆ. ಒಂದು ಮತ್ತು ಎರಡನೇ ಆರೋಪಿಯು ಕೂಡಿಕೊಂಡು ಧಾರವಾಡದ ಚೈತನ್ಯ ನಗರ ಹಾಗೂ ಸಾಧನಕೇರಿಯಲ್ಲಿ ಮಹಿಳೆಯ ಕೊರಳಲ್ಲಿ ಇದ್ದ ಸರಗಳನ್ನು ಕಿತ್ತುಕೊಂಡು ಅಪಹರಿಸಿಕೊಂಡು ಮೋಟಾರ್ ಸೈಕಲ್ ಮೇಲೆ ಹೋದೆವು ಎಂದು ತಿಳಿಸಿರುತ್ತಾರೆ. ಆರೋಪಿತರು ತಮ್ಮ ಜೊತೆಗೆ ಬಂದರೆ ತಾವು ಸುಲಿಗೆ ಮಾಡಿದ ಆಭರಣಗಳನ್ನು ಹಾಗೂ ಕೃತ್ಯಕ್ಕೆ ಬಳಸಿದ ದ್ವಿಚಕ್ರ ವಾಹನವನ್ನು ತೋರಿಸುತ್ತೇವೆ ಎಂದು ತಿಳಿಸಿದರು. ಹಾಗಾಗಿ ದಿಃ19-11-2014 ರಂದು ಪಂಚರಾದ ಚಾಸಾ.6 ಮತ್ತು 7 ರವರನ್ನು ಬರಮಾಡಿಕೊಂಡು ಹಾಗೂ ಪತ್ತಾರ ಚಾಸಾ.12 ರವರನ್ನು ಠಾಣೆಗೆ ಕರೆಯಿಸಿಕೊಂಡು ಸದರಿ ವಿಷಯವನ್ನು ತಿಳಿಸಿದೆವು. ನಂತರ ಪಂಚರು, ಸಿಬ್ಬಂದಿ, ಚಾಸಾ.18, ಚಾಸಾ.12, ಆರೋಪಿತರು ಕೂಡಿಕೊಂಡು ಇಲಾಖಾ ಜೀಪ್ ದಲ್ಲಿ ಹೊರಟೆವು. ಆರೋಪಿತರು ನಮ್ಮನ್ನು ನವನಗರ ಎರಡನೇ ಕ್ರಾಸ್ ಒಂದನೇ ಮಹಡಿಯಲ್ಲಿ ಮಣಿಪುರ ಪೈನಾನ್ಸ ಬ್ಯಾಂಕ್ ಗೆ ಕರೆದುಕೊಂಡು ಹೋದರು. ಸದರಿ ಮಣಿಪುರ ಫೈನಾನ್ಸ ದಲ್ಲಿ ಇದ್ದ ವ್ಯಕ್ತಿಯಾದ ಚಾಸಾ.11 ರವರನ್ನು ತೋರಿಸಿ ಆತನು ಇದ್ದ ಸಮಯದಲ್ಲಿ ಬಂಗಾರವನ್ನು ಅಡವಿಟ್ಟಿರುತ್ತೇವೆ ಎಂದು ತಿಳಿಸಿದನು.

6. ಸದರಿ ಚಾಸಾ.11 ರವರನ್ನು ವಿಚಾರಣೆ ಮಾಡಲಾಗಿ ಆರೋಪಿತರು ಸುಲಿಗೆ ಮಾಡಿಕೊಂಡು ಬಂದ ಅಡವಿಟ್ಟ ಬಂಗಾರದ ಚೈನ ಮತ್ತು ಮಂಗಳ ಸೂತ್ರಗಳನ್ನು ಹಾಜರು ಪಡಿಸಲು ಹೇಳಿದೆವು. ದಾಖಲೆಗಳನ್ನು ಪರಿಶೀಲನೆ ಮಾಡಿದಾಗ ಆರೋಪಿತರು ಬಂಗಾರದ ಆಭರಣಗಳನ್ನು ಅಡವಿಟ್ಟ ಬಗ್ಗೆ ಗೊತ್ತಾಯಿತು. ಅವುಗಳನ್ನು ಪರಿಶೀಲನೆ ಮಾಡಿದಾಗ ಸದರಿ ಬಂಗಾರದ ಆಭರಣಗಳು ಸುಲಿಗೆಗೆ ಸಂಬಂಧಪಟ್ಟಿರುತ್ತವೆ ಎಂದು ಖಚಿತವಾಯಿತು. ಚಾಸಾ.11 ರವರು ಮೂರು ಬಂಗಾರದ ಎರಡು ಎಳೆ ಬಂಗಾರದ ಚೈನ್ ಅದರಲ್ಲಿ ಒಂದು ಎಳೆ ಕಟ್ ಆಗಿತ್ತು. ಅದರಲ್ಲಿ ಕೆಂಪು ಮುತ್ತು ಜೋಡಿಸಲಾಗಿತ್ತು. ಅದನ್ನು ತೂಕ ಮಾಡಲಾಗಿ ಅದು 26.5 ಗ್ರಾಂ ತೂಕದ್ದು ಆಗಿತ್ತು. ಇನ್ನೊಂದು ಬಂಗಾರದ ಮಂಗಳ ಸೂತ್ರ ತೂಕ ಮಾಡಲಾಗಿ ಅದು ಬಂಗಾರದ ತಾಳಿ ಮುತ್ತು ಇತ್ತು, ಅದು 41.4 ಗ್ರಾಂ ಇತ್ತು. ಇನ್ನೊಂದು ಬಂಗಾರದ ಮಂಗಳ ಸೂತ್ರ 24 ತುಂಡು ತುಂಡುಗಳು ಆಗಿತ್ತು. ತೂಕ ಮಾಡಲಾಗಿ ಅದು 27 ಗ್ರಾಂ ಇತ್ತು. ಚಾಸಾ.6,7 ಸಮಕ್ಷಮ ಚಾಸಾ.12 ರವರು ಬಂಗಾರದ ಆಭರಣ ಪರಿಶೀಲಿಸಿ ತೂಕ ಮಾಡಿ, ಚಾಸಾ.18 ಜಪ್ತಿ ಪಡಿಸಿಕೊಂಡರು. ಸದರಿ ಪಂಚನಾಮೆಯನ್ನು ಮುಂಜಾನೆ 11.40 ಗಂಟೆಯಿಂದ ಮಧ್ಯಾಹ್ನ 1.45 ಗಂಟೆಯವರೆಗೆ ಮಾಡಿ ಜಪ್ತಿ ಪಡಿಸಿಕೊಂಡರು. ಸಾಕ್ಷಿಯು ಈಗಾಗಲೇ ಗುರುತಿಸಿರುವ ನಿಪಿ.5 ಜಪ್ತಿ ಪಂಚನಾಮೆಯನ್ನು ಹಾಗೂ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.5(ಬಿ) ಎಂದು ಗುರುತಿಸಲಾಯಿತು.

7. ಒಂದನೇ ಆರೋಪಿಯು ಅಮರಗೋಳದಲ್ಲಿರುವ ತನ್ನ ಮನೆಗೆ ಕರೆದುಕೊಂಡು ಹೋದನು. ಸುಲಿಗೆ ಮಾಡಿದ ಬಂಗಾರದ ಆಭರಣಗಳನ್ನು ಮನೆಯಲ್ಲಿ ಇಟ್ಟಿರುತ್ತಾನೆ. ಆರೋಪಿಯು ತನ್ನ ಮನೆಯಲ್ಲಿ ಬೆಡರೂಮ್ ದಲ್ಲಿರುವ ಟ್ರೆಸರಿಯಲ್ಲಿ ಇಟ್ಟಿದ್ದನ್ನು ತೋರಿಸಿ ಹಾಜರು ಪಡಿಸಿರುತ್ತಾನೆ. ಒಂದು ಬಂಗಾರದ ಕಟ್ ಆದ ಚೈನ್ ನ ತೂಕ 10 ಗ್ರಾಂ , ಇನ್ನೊಂದು ಬಂಗಾರದ ಚೈನ್ ತೂಕ 8 ಗ್ರಾಂ , 2 ಬಂಗಾರದ ತಾಳಿ ಗಳು ಅವು ಅಂದಾಜು 5 ಗ್ರಾಂ ಇದ್ದವು. ಕೃತ್ಯಕ್ಕೆ ಬಳಸಿದ ಒಂದು ಮೋಟಾರ್ ಸೈಕಲ್ ಕೆ ಎ 25 9150 ಇತ್ತು. ಅದು ಡಿಸ್ಕವರಿ ಬಜಾಜ ಮೋಟಾರ್ ಸೈಕಲ್ ಇತ್ತು. ಇವುಗಳನ್ನು ಪಂಚನಾಮೆ ಮಾಡಿ ಜಪ್ತಿ ಪಡಿಸಿಕೊಂಡೆವು. ನಂತರ ಆರೋಪಿಯ ಜೊತೆಗೆ ಹಾಗೂ ಮುದ್ದೇಮಾಲಿನ ಜೊತೆಗೆ ನಾವು ಠಾಣೆಗೆ ಬಂದೆವು.

8. ಈ ಪ್ರಕಾರ ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿರುತ್ತೇನೆ. ಪಂಚನಾಮೆಗಳನ್ನು ತನಿಖಾಧಿಕಾರಿಯ ಮೌಖಿಕ ಆದೇಶದ ಮೇರೆಗೆ ಪಂಚರು ಹೇಳಿದಂತೆ ಬರೆದು ನಾನು ಸಹಿ ಮಾಡಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ ಎರಡನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಒಂದನೇ ಆರೋಪಿಯು ಗೈರು ಹಾಜರು ಇದ್ದು ಒಂದನೇ ಆರೋಪಿತನನ್ನು ಗುರುತಿಸಲು ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ಹೇಳಿರುತ್ತಾರೆ. ಸಾಕ್ಷಿಯು ಈ ಪ್ರಕರಣದ ಬಂಗಾರದ ಚೈನ್ ನ್ನು ನಿಪಿ.2 ಛಾಯಾ ಚಿತ್ರದಲ್ಲಿ ನೋಡಿ ಗುರುತಿಸಿರುತ್ತಾರೆ.

ಪಾಟೀಸವಾಲುಃ ಆರೋಪಿ ನಂ.**1** ಪರ ವಕೀಲರಾದ ಶ್ರೀ. ಎನ್ ಎಸ್ ಇ ವಕೀಲರವರಿಂದಃ

1. ನಿಪಿ.4 ಮತ್ತು 5 ರಲ್ಲಿ ತನಿಖಾಧಿಕಾರಿಯ ಮೌಖಿಕ ಆದೇಶದ ಮೇಲೆ ಬರೆದಿದ್ದೇನೆ ಎಂದು ಹಿಂಬರಹವನ್ನು ಪಂಚನಾಮೆಗಳಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ. ಬಾಲಾಜಿ ಗೋಲ್ಡ ದಲ್ಲಿ ರಾಘವೇಂದ್ರ ಶೇಟ್ ಎನ್ನುವ ವ್ಯಕ್ತಿ ಇರಲಿಲ್ಲ, ಅವನ ಬಗ್ಗೆ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಪಿ.4 ರಲ್ಲಿ ಸದರಿ ರಾಘವೇಂದ್ರ ಶೇಟ್ ಎಂದು ಸಹಿ ಮಾಡಿರುತ್ತಾರೆ. ಬಾಲಾಜಿ ಗೋಲ್ಡ ಹಾಗೂ ರಾಘವೇಂದ್ರ ಶೇಟ್ ಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ.4 ರಲ್ಲಿರಾಘವೇಂದ್ರ ಶೇಟ್ ಸಹಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗುನ್ನಾ ನಂ. 243/2014 ರಲ್ಲಿ ಸಹ ನಾನು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿ. ಸದರಿ ಗುನ್ನಾ ನಂಬರ ಪ್ರಕರಣದಲ್ಲಿ ಆರೋಪಿತರು ಬಿಡುಗಡೆಗೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಪೋಲಿಸ್ ಠಾಣೆಯನ್ನು ಎಷ್ಟು ಹೊತ್ತಿಗೆ ಬಿಟ್ಟೆವು ಹಾಗೂ ಸ್ಥಳಕ್ಕೆ ಎಷ್ಟು ಹೊತ್ತಿಗೆ ಮುಟ್ಟಿದೆವು ಎಂದು ನನ್ನ ಹೇಳಿಕೆಯಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಹೇಳಿಕೆಯಲ್ಲಿ ಹೇಳದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಇಲಾಖಾ ಜೀಪ್ ನ ಚಾಲಕ ಯಾರು ಇದ್ದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಬಾಲಾಜಿ ಗೋಲ್ಡ ಅಂಗಡಿ ನಾಲ್ಕು ರಸ್ತೆಯ ಹತ್ತಿರ ಇರುವ ಅಂಗಡಿ ಎಂದರೆ ಸರಿ. ಅಲ್ಲಿ ಸಾಕಷ್ಟು ಜನ ಮತ್ತು ವಾಹನಗಳು ಹೋಗುತ್ತವೆ ಎಂದರೆ ಸರಿ. ಸದಿರಿ ಅಂಗಡಿಯ ಹತ್ತಿರ ಸಾಕಷ್ಟು ವಾಹನಗಳು ನಿಂತಿದ್ದವು ಎಂದರೆ ಸರಿಯಲ್ಲ. ಆದರೆ ಆರೋಪಿಯ ಮೋಟಾರ್ ಸೈಕಲ್ ವಾಹನ

ಇತ್ತು ಎಂದು ಹೇಳುತ್ತಾರೆ. ಆರೋಪಿತರಿಗೆ ಸಂಬಂಧ ಪಟ್ಟ ದ್ವಿಚಕ್ರ ವಾಹನ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಆರೋಪಿತರು ಮಣಿಪುರ ಫೈನಾನ್ಸ್ ದಲ್ಲಿ ಅಡವಿಡಲು ಹೋದಾಗ ಚಾಸಾ.11 ಇದ್ದ ಎಂದು ಹೇಳಿದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಮಣಿಪುರ ಫೈನಾನ್ಸ್ ದಲ್ಲಿ ಅಡವಿಟ್ಟ ಬಗ್ಗೆ ದಾಖಲೆಗಳನ್ನು ಪರಿಶೀಲನೆ ಮಾಡಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರನ್ನು ಕರೆದುಕೊಂಡು ಹೋಗಿ ಅಲ್ಲಿ ಬಂಗಾರದ ಆಭರಣಗಳನ್ನು ಜಪ್ತಿ ಪಡಿಸಿಕೊಂಡೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ದಾಳಿ ಮಾಡಿಲ್ಲ ಹಾಗೂ ಆರೋಪಿತರು ತಮ್ಮ ಹೆಸರು ಹೇಳಿಲ್ಲ ಎಂದರೆ ಸರಿಯಲ್ಲ. ಒಂದು ಮತ್ತು ಎರಡನೇ ಆರೋಪಿತರ ಕಡೆಯಿಂದ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಒಂದು ಮತ್ತು ಎರಡನೇ ಆರೋಪಿತರು ಓಡಿ ಹೋಗಲು ಪ್ರಯತ್ನ ಪಟ್ಟರು, ಅವರನ್ನು ಹಿಡಿದುಕೊಳ್ಳಲು ಪ್ರಯತ್ನ ಪಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಣಿಪುರ ಫೈನಾನ್ಸ್‌ಗೆ ಹೋಗಿ ಅಲ್ಲಿ ಬಂಗಾರ ಆಭರಣಗಳನ್ನು ಜಪ್ತಿ ಪಡಿಸಿಕೊಂಡೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯನ್ನು ತಿರುಚಿ ಸುಳ್ಳಾಗಿ ಬರೆಯಿಸಿ ಈಗ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಮಾಳಮಡ್ಡಿ ಆಗಲೀ, ಹಾಗೂ ಇತರೆ ಸ್ಥಳಗಳಲ್ಲಿ ಆರೋಪಿತರು ಕಳ್ಳತನ ಮಾಡಿದ ಬಗ್ಗೆ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇಲಾಖಾ ಜೀಪ್ ಗೆ ಹೋಗಿ ದಾಳಿ ಮಾಡಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದನೇ ಆರೋಪಿ ಮನೆಗೆ ಹೋಗಿ ಆತನು ತೋರಿಸಿದ ವಸ್ತುಗಳನ್ನು ಪಂಚನಾಮೆ ಮಾಡಿ ಜಪ್ತಿ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ನಿಪಿ.4 ಮತ್ತು 5 ಪಂಚನಾಮೆಗಳನ್ನು ಠಾಣೆಯಲ್ಲಿ ಬರೆದು ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರಿಗೂ ಹಾಗೂ ಘಟನೆಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ನಾನು ಸುಳುಳ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.2 ರಲ್ಲಿ ಕಂಡು ಬರುವ ಬಂಗಾರದ ಚೈನ ಗಳಿಗೂ ಹಾಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಕಯಲ್ಲ. ಆರೋಪಿತರಿಗೆ

ಸಂಬಂಧಿಸಿದಂತೆ ಮಣಿಪುರ ಫೈನಾನ್ಸದಲ್ಲಿ ಯಾವುದೇ ಖಾತೆ ಇರಲಿಲ್ಲ ಹಾಗೂ ಅಡವಿಟ್ಟ ದಾಖಲೆಗಳು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳುಸಾಕ್ಷಿಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು: ಆರೋಪಿ ನಂ.**2** ಪರ ವಕೀಲರು ಆರೋಪಿ ನಂ.**1** ಪರ ವಕೀಲರು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದರಿಂದ ಅಳವಡಿಸಿಕೊಳ್ಳಲಾಯಿತು.

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.